ಸಾಕ್ಷಿ ಯನ್ನು ದಿಃ 25.06.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿ, ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ದಿಃ 10.04.2023 ರಂದು ನಿಂಗಮ್ಮ ಹಾಗೂ ಮೀನಾಕ್ಷಮ್ಮ ರವರು ಸ್ವಾಮಿ ಎಸ್.ಟಿ ರವರಿಗೆ ಬರೆದುಕೊಟ್ಟ ಸಾಮಾನ್ಯ ಅಧಿಕಾರ ಪತ್ರವನ್ನು ನಿಪಿ - 1 ಎಂದು,
2. ದಿಃ 20.04.1947 ರಂದು ಕಾಡೇಗೌಡ ಹಾಗೂ ಬೀರೇಗೌಡ ರವರು ಮರಿಗೌಡರವರಿಗೆ ಬರೆದುಕೊಟ್ಟ ಕ್ರಯಪತ್ರವನ್ನು ನಿಪಿ - 2 ಎಂದು,
3. ದಿಃ 12.07.2010 ರಂದು ಗೌರಮ್ಮ ರವರಿಗೆ ಶ್ರೀನಿವಾಸ ರವರು ಬರೆದುಕೊಟ್ಟ ಕ್ರಯಪತ್ರದ ಕಂಪ್ಯೂಟರ್ ದೃಢೀಕೃತ ಪ್ರತಿಯನ್ನು ನಿಪಿ - 3 ಎಂದು,
4. ವಂಶವೃಕ್ಷ ಪ್ರಮಾಣ ಪತ್ರವನ್ನು ನಿಪಿ - 4 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ